ಇ) ಇದಕ್ಕೆ ಬೇಕಾದ ವಿದ್ಯುತ್ ನೀರು ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ರಾಜ್ಯ ಸರ್ಕಾರ ಪೂರೈಸುವುದೇ

ಈ) ಈ ತೈಲಗಾರಕ್ಕಾಗಿ ವಶಪಡಿಸಿಕೊಳ್ಳುವ ಭೂಮಿಯೆಷ್ಟು ಇಷ್ಟರಲ್ಲಿ ಏನಾದರೂ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಮಂಗಳೂರು ತೈಲ ಶುದ್ದೀಕರಣ ಸ್ಥಾಪನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಮ್ಮಿಕೊಳ್ಳುವ ಉದ್ದೇಶವನ್ನು ಭಾರತ ಸರ್ಕಾರ ಸೂಚಿಸಿದೆ.

ಆ) ಯೋಜನಾ ಪ್ರಾಧಿಕಾರ ತಯಾರಿಸುವ ಕರಡು ಯೋಜನೆ ಪ್ರಕಾರ ಅಂದಾಜು ವೆಚ್ಚವು 1,050 ಕೋಟಿ ರೂಪಾಯಿಗಳಾಗಲಿದೆ. (1986 ರ ಬೆಲೆಯ ರೀತ್ಯಾ) ಕೇಂದ್ರ ಸರ್ಕಾರದ ಅಂತಿಮ ಒಪ್ಪಿಗೆ ಈ ಯೋಜನೆಗೆ ಇನ್ನು ಬಂದಿರುವುದಿಲ್ಲ.

ಇ) ಯೋಜನೆಗೆ ಬೇಕಾಗಿರುವ ವಿದ್ಯುತ್ ನೀರು ಮತ್ತು ಇತರ ಮೂಲಭೂತ ಅವಶ್ಯಕತೆಗಳನ್ನು ನೀಡಲು ರಾಜ್ಯ ಸರ್ಕಾರ ಒಪ್ಪಿದೆ?

ಈ) ಈ ಯೋಜನೆಗೆ ಒಟ್ಟು 1500 ಎಕರೆ ಭೂಮಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. ಈ ಪೈಕಿ 600 ಎಕರೆ 52 ಸೆಂಟ್ಸ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಗ್ರಾನೈಟ್ ಕಲ್ಲುಗಳ ರಾಷ್ಟ್ರೀಕರಣ ಬಗ್ಗೆ

1387 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾನೈಟ್ (ಗಣಿಕಲ್ಲುಗಳು) ಕಲ್ಲುಗಳ ಗಣಿಗಳನ್ನು ರಾಷ್ಟ್ರೀಕರಣ ಮಾಡಲಾಗುವುದೇ?

ಆ) ಗ್ರಾನೈಟ್ ಕಲ್ಲುಗಳ ವ್ಯವಹಾರದಲ್ಲಿರುವ ದಲ್ಲಾಳಿಗಳನ್ನು ಆಳಿಸಿ ಹಾಕಲಾಗುವುದೇ?

ಇ) ದಲ್ಲಾಳಿಗಳು ಕೋಟಿಗಟ್ಟಲೆ ಹಣವನ್ನು ಸೂರೆ ಮಾಡುತ್ತಿರುವುದನ್ನು ತಕ್ಷಣ ನಿಲ್ಲಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಈ) 1987ರಿಂದ 1990 ಡಿಸೆಂಬರ್ ಅಂತ್ಯದವರೆಗೆ ಈ ಗ್ರಾನೈಟ್ ಕಲ್ಲುಗಳ ವ್ಯವಹಾರದಿಂದ ಆಗಿರುವ ಲಾಭವೆಷ್ಟು? (ವರ್ಷವಾರು ವಿವರ ನೀಡುವುದು)

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು):

ಅ) ಇಲ್ಲ

ಆ) ಅನಧಿಕೃತ ಜನರು ಗ್ರಾನೈಟ್ ಕಲ್ಲುಗಣಿಗಾರಿಕೆಯನ್ನು ಮಾಡುವುದನ್ನು ತಡೆಯುವ ಪ್ರಯತ್ನವು ನಡೆಯುತ್ತಿದೆ.

ಇ) ಮಂಗಳೂರಿನಲ್ಲಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ ಅನಧೀಕೃತ ಗ್ರಾನೈಟ್ ಸಾಗಾಣಿಕೆದಾರರಿಗೆ ತನಿಖೆ ಮಾಡಿ ದಂಡವನ್ನು ವಿಧಿಸಿ ವಸೂಲಿ ಮಾಡಲಾಗುತ್ತಿದೆ ಮತ್ತು ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಅನಧಿಕೃತ ಕಲ್ಲು ಗಣಿಗಾರಿಕೆಯ ಸ್ಥಳಗಳಲ್ಲಿ ದಾಳಿ ನಡೆಸುವ ಮೂಲಕ ಸರ್ಕಾರಕ್ಕೆ ನಷ್ಟವಾಗುವುದನ್ನು ನಿಲ್ಲಿಸುತ್ತಿದ್ದಾರೆ.

ಈ) ವ್ಯಾಪಾರದ ಲಾಭದ ವಿವರಗಳು ದೊರೆಯುವುದಿಲ್ಲ. ಆದರೂ ಸಹ ರೂ. 254.07 ಲಕ್ಷಗಳ ರಾಜಧನವನ್ನು ವಸೂಲಿ ಮಾಡಲಾಗಿದೆ.